ಪದಬಂಧ



ಎಡದಿಂದ ಬಲಕ್ಕೆ:
1. ಅಲ್ಲಿನ ಅರ್ಧಕ್ಕರ್ಧ ಪ್ರದೇಶದಲ್ಲಿ ಸದಾ ಕಾರ್ಗತ್ತಲು (4)
3. ಕಳ್ಳನಿಗೂ ತನ್ನ ಅಜ್ಜಿಯ ಬಗೆಗೆ ತುಂಬ ಆಸಕ್ತಿ (3)
4. ಹೊನ್ನಿನ ಆಸೆಗಾಗಿ ಇಂತಹ ಕೊಲೆ (3)
6. ಸಮಸ್ಯೆ ಏನಿಲ್ಲ. ಇದೊಂದು ಹೂ ಗಿಡ ಅಷ್ಟೆ (4)
7. ಮನದಲ್ಲಿ ಜ್ಞಾಪಿಸಿಕೋ; ನೀರಲ್ಲಿ ತೋಯಿಸು (3)
9. ಆರ್ಯಕೆಯ ರೀತಿ ನೀತಿ ವಿವರಿಸುವ ಮೂಲಗ್ರಂಥ (3)
11. ತಾರೆಯರನ್ನು ಗುರುತಿಸಿ ತರಲು ಎಲ್ಲ ಏರ್ಪಾಡು (3)
13. ಮಕ್ಕಳೆಲ್ಲ ಕೊಂಡು ತಂದದ್ದು ಸುಂದರ ತಾವರೆ (3)
15. ಉದ್ದೇಶ ಏನೇ ಇರಲಿ, ಹೀಗೇಕೆ ತಾತ್ಸಾರ? (4)
17. ಕಣ್ಣೀರು ತರಿಸುವಂತಿತ್ತು, ನಿದ್ರೆಯಲ್ಲಿ ಕಂಡ ಚಲನಚಿತ್ರ (3)
18. ಆಹಾರವಿಲ್ಲದಿದ್ದರೂ ಸಂತಸದ ಪ್ರಯಾಣವೇ? (3)
19. ಕಾರು ಚಲಿಸಿದಲ್ಲೆಲ್ಲ ಕಂಡದ್ದು ಬರೀ ಪೊರೆ ಸಸ್ಯ (4)

ಮೇಲಿಂದ ಕೆಳಕ್ಕೆ:
1. ಸಂಜೆ ಆಯಿತೆಂದು ಎಲ್ಲರೂ ಹೆದರುವಂತೆ ಮಾಡು (3)
2. ಬಗೆಹರಿಸಲಾಗುವುದಿಲ್ಲ ಬಿಡಿ, ಅಂಥ ಗುಟ್ಟು! (3)
3. ಮುಖವನ್ನೇ ಬದಲಿಸಿಕೊಳ್ಳ ಬಯಸುವುದು ಅದೆಂಥ ಆಸೆ! (3)
5. ಕಟುಕನ ಕ್ರೌರ್ಯ ಕಂಡು ಹೆದರಿಕೆಯ ಕಂಪನ (3)
7. ಗೆಳೆತನ ಗಳಿಸಲೆಂದು ಹೀಗೆಲ್ಲ ಎಗರಾಟವೇ? (3)
8. ಮೂರು ಸಾವಿರ ಸರಿ. ಸ್ವಲ್ಪ ಹೆಚ್ಚು ಕಡಿಮೆ ಅಷ್ಟೆ (3)
9. ಅಲ್ಲಿಗೆ ತಲುಪುವ ತನಕ ಬರೀ ಭಯ, ಚಿಂತೆ (3)
10. ಇನ್ನೂ ಸೇರಲಿಲ್ಲವೇ? ಕಳುಹಿದ ಮಾವಿನ ಫಲ? (3)
11. ಯಾಂತ್ರಿಕ ಜೀವನ ಮರೆಯಲು ಹೊರಟ ಪ್ರವಾಸಿ (3)
14. ಈ ಮರದ ವಾಸನೆ, ಎಷ್ಟು ಸವಿ ಹೌದಲ್ಲ? (3)
15. ಕಸವೇನೂ ಇಲ್ಲ, ಅದೆಲ್ಲ ಬರೀ ಮರಳು (3)
16. ನೋವಿನಲ್ಲೂ ನೆನಪಾಗುವ ನಾಟ್ಯ ವಿಶಾರದ ಖಗ (3)

## 19-2-15ರ ಉತ್ತರಗಳು

ಎಡದಿಂದ ಬಲಕ್ಕೆ
1. ಮಂದಾಕಿನಿ; 3. ಕಿರೀಟ; 4. ಲಸಿಕೆ; 6. ಪರಕಾಯ; 7. ಮನುಕುಲ; 8. ಮತದಾರ; 10. ತಹಬಂದು; 12. ಪರಿಮಿತ; 14. ಸರಂಜಾಮು; 16. 'ಯರಹ' (= ಹರಯ ಹಿಂದು ಮುಂದು); 17. ನಿಸರ್ಗ, 18. ನೆನಪಿಸು

ಮೇಲಿಂದ ಕೆಳಕ್ಕೆ
1. ಮಂಟಪ; 2. ನಿಲಯ; 3. ಕಿರುಕುಳ; 5. ಕೆನೆತ; 7. ಮಡಿವಂತ; 9. ರಮಾಕಾಂತ; 11. ಬಂಡಾಯ, 13. ಅರಿವರ್ಗ; 14. ಸಹನೆ; 15. ಮುನಿಸು

## ಪ್ರಶ್ನಾಂಕಣ

# ರಾಕೆಟ್ ಮತ್ತು ಕ್ಷಿಪಣಿ-ಬೇರೆ ಬೇರೆ ಹೇಗೆ?

ರಾಕೆಟ್ ಮತ್ತು ಕ್ಷಿಪಣಿ–ಇವೆರಡೂ ವಿಶೇಷ 'ವಾಹನ'ಗಳು. ಪರಸ್ಪರ ಬಹಳ ಹೋಲುವ ಬಾಹ್ಯರೂಪ ಮತ್ತು ಒಂದೇ ರೀತಿಯ ಕಾರ್ಯತತ್ವವನ್ನು ಪಡೆದಿರುವ ಈ ವಾಹನಗಳು ಗಾತ್ರದಲ್ಲಿ ವೇಗದಲ್ಲಿ ಹಾಗೂ ಬಳಕೆಯ ಉದ್ದೇಶಗಳಲ್ಲಿ ಬಹಳ ಭಿನ್ನ ಭಿನ್ನ.

ರಾಕೆಟ್ (ಚಿತ್ರ–1) ಅಂತರಿಕ್ಷಕ್ಕೆ ತೆರಳಬಲ್ಲ ವಾಹನ. ಹಾಗೆಂದರೆ ರಾಕೆಟ್ ಭೂ ವಾಯುಮಂಡಲದಾಚೆಗೂ ಸಾಗುತ್ತವೆ. ಹಾಗೆ ಬಾಹ್ಯಾಕಾಶವನ್ನು ತಲುಪಬೇಕಾದ್ದರಿಂದ ಅವು ಚಲಿಸುವ ವೇಗ ವಿಪರೀತ, ಕಲ್ಪನಾತೀತ. ಎಲ್ಲ ರಾಕೆಟ್‌ಗಳೂ 'ವಿಮೋಚನಾ ವೇಗ'ವನ್ನು ಎಂದರೆ ಭೂ ಗುರುತ್ವಾಕರ್ಷಣೆಯಿಂದ ತಪ್ಪಿಸಿಕೊಳ್ಳಲು ಬೇಕಾದ ಕನಿಷ್ಠ ವೇಗವನ್ನು ಮೀರಿ ಹಾರುತ್ತವೆ. ಈ ವೇಗ ಪ್ರತಿ ಸೆಕೆಂಡ್‌ಗೂ ಹನ್ನೊಂದು ಕಿಲೋಮೀಟರ್‌ಗಿಂತ ಹೆಚ್ಚು. ಹಾಗೆ ಹಾರಲು ಬೇಕಾಗುವ 'ತಳ್ಳುಬಲ'ವನ್ನು ಗಳಿಸಲು ರಾಕೆಟ್‌ಗಳು ಅಗಾಧ ಪ್ರಮಾಣದ ಇಂಧನವನ್ನು ಹೊತ್ತು ದಹಿಸುತ್ತ ಮೇಲೇರುತ್ತವೆ. ಈ ಕಾರಣದಿಂದ ರಾಕೆಟ್‌ಗಳದು ಬೃಹದಾಕಾರ; ಅನೂಹ್ಯ ತೂಕ. ಆದ್ದರಿಂದಲೇ ರಾಕೆಟ್‌ಗಳನ್ನು ನೆಲದ ಮೇಲಿನ ವಿಶೇಷ ನಿರ್ಮಿತ ಉಡ್ಡಯನ ಕೇಂದ್ರಗಳಿಂದ ಮಾತ್ರ ಹಾರಿಸಬಹುದು. ರಾಕೆಟ್‌ಗಳ ಪಯಣ ಅಂತರಿಕ್ಷದತ್ತ ಮಾತ್ರ. ಅಂತರಿಕ್ಷಕ್ಕೆ, ಅಲ್ಲಿನ ನಿಯೋಜಿತ ಎತ್ತರಕ್ಕೆ ವ್ಯೋಮಸಾಧನಗಳನ್ನು ಎಂದರೆ ಜನಸಹಿತ ಅಥವಾ ಜನರಹಿತ ವ್ಯೋಮನೌಕೆಗಳು, ಕೃತಕ ಉಪಗ್ರಹಗಳು ಇತ್ಯಾದಿಗಳನ್ನು ಹೊತ್ತೊಯ್ದು ತಲುಪಿಸುವುದೇ ರಾಕೆಟ್‌ಗಳ ಕೆಲಸ. ಸಹಜವಾಗಿಯೇ ರಾಕೆಟ್‌ಗಳ ನಿರ್ಮಾಣದ ವೆಚ್ಚವೂ ಭಾರೀ ಪ್ರಮಾಣದ್ದೇ.




ರಾಕೆಟ್‌ಗಳಿಂದ ಭಿನ್ನವಾಗಿ ಕ್ಷಿಪಣಿಗಳು ಬಾಹ್ಯಾಕಾಶಕ್ಕೆ ಹೋಗುವುದಿಲ್ಲ. ಕ್ಷಿಪಣಿಗಳಿಗೆ (ಚಿತ್ರ–2) ಅಂಥ ಉದ್ದೇಶವಾಗಲೀ ಸಾಮರ್ಥ್ಯವಾಗಲೀ ಇಲ್ಲ. ಕ್ಷಿಪಣಿಗಳದು ರಾಕೆಟ್‌ಗಳಿಗಿಂತ ಕಡಿಮೆ ಗಾತ್ರ ಕಡಿಮೆ ವೇಗ. ಸಾಮಾನ್ಯವಾಗಿ ಕ್ಷಿಪಣಿಗಳು ಸ್ಫೋಟಕ ಬಾಂಬ್‌ಗಳು ಅಥವಾ ಅಣ್ವಸ್ತ್ರಗಳನ್ನು ಹೊತ್ತು ಸಾಗಿಸಿ ಪೂರ್ವಯೋಜಿತ ನೆಲೆಗಳ ಮೇಲೆ ಬೀಳಿಸುತ್ತವೆ. ಹೀಗೆ ಪರಮಾಣು ಸಿಡಿತಲೆಗಳನ್ನು ಧರಿಸಿ ಖಂಡದಿಂದ ಖಂಡಕ್ಕೆ ತಲುಪುತ್ತವೆ. ನೆಲದಿಂದ ನೆಲಕ್ಕೆ, ನೆಲದಿಂದ ಆಕಾಶಕ್ಕೆ, ಆಕಾಶದಿಂದ ನೆಲಕ್ಕೆ ಮತ್ತು ಆಕಾಶದಿಂದ ಆಕಾಶಕ್ಕೆ ಯುದ್ಧಾಸ್ತ್ರಗಳನ್ನು ಹೊತ್ತು ಹಾರುವ ಕ್ಷಿಪಣಿಗಳನ್ನು ರಾಕೆಟ್‌ಗಳಂತೆ ನೆಲದಿಂದಲೇ ಹಾರಿಸಬೇಕೆಂದೇನಿಲ್ಲ. ಕ್ಷಿಪಣಿಗಳನ್ನು ನೆಲದಿಂದ, ವಿಶೇಷ ಯುದ್ಧ ವಿಮಾನಗಳಿಂದ ಹಾಗೂ ವಿಶೇಷ, ಜಲಾಂತರ್ಗಾಮಿಗಳಿಂದಲೂ (ಚಿತ್ರ–3) ಉಡಾಯಿಸಬಹುದು.

ಸ್ಪಷ್ಟವಾಗಿಯೇ ರಾಕೆಟ್ ವ್ಯೋಮಯಾನದ ವಾಹನ; ಕ್ಷಿಪಣಿ ಸಮರ ಸಂಬಂಧೀ ವಾಹನ.

■ ಎನ್. ವಾಸುದೇವ್